ಸ್ವತಃ ನಾನೇ ಹೋಗಿ ಈ ಸೇತುವೆಯನ್ನು ನೋಡಿ ಬಂದಿದ್ದೇನೆ. ಈ ಕೆಲಸವನ್ನು ಆ ಸಂಸ್ಥೆಗೆ ವಹಿಸಿಕೊಟ್ಟು ಮುಗಿಸುತ್ತೇವೆ.

ಕರ್ನಾಟಕದಲ್ಲಿ ಹೊಸ ಜಿಲ್ಲೆಗಳ ರಚನೆ

ಶ್ರೀ ಡಿ.ಆರ್. ಪಾಟೀಲ್ (ಗದಗ) : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಹೊಸ ಜಿಲ್ಲೆಗಳನ್ನು ಉದ್ಘಾಟಿಸುವುದರ ಬಗ್ಗೆ ಪತ್ರಿಕೆಗಳಲ್ಲಿ ಈಗಾಗಲೇ ವರದಿಯಾಗಿದೆ. ಹೊಸ ಜಿಲ್ಲೆಗಳನ್ನು ರಚನೆ ಮಾಡುವ ಬಗ್ಗೆ ಸರ್ಕಾರದವರು ಈಗಾಗಲೇ ಡ್ರಾಫ್ಟ್ ನೋಟಿಫಿಕೇಶನ್ ಇಶ್ಯೂ ಮಾಡಿದ್ದು, ಈ ಡ್ರಾಫ್ಟ್ ನೋಟಿಫಿಕೇಶನ್ ಅನ್ನು ನೀವು ಹಾಗೆಯೇ ಅಕ್ಸೆಪ್ಟ್ ಮಾಡಿದರೆ ಪರವಾಗಿಲ್ಲ ಆದರೆ, ಅದರಲ್ಲಿ ಏನಾದರೂ ಬದಲಾವಣೆ ಮಾಡುವ ವಿಚಾರವಿದ್ದರೆ ಹೊಸ ಜಿಲ್ಲೆಗಳಿಗೆ ಸಂಬಂಧಿಸಿದ ಜನ ಪ್ರತಿನಿಧಿಗಳ ಜೊತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಕುರಿತ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮವಾದ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಸಂಬಂಧಪಟ್ಟ ಎಲ್ಲರ ಜೊತೆಯೂ ಮಾತನಾಡಿದ್ದು, ನಿನ್ನೆ ಕೂಡ ತಮಗೆ ಈ ವಿಚಾರ ತಿಳಿಸಿದ್ದು, ಈ ತಿಂಗಳ 24ನೇ ತಾರೀಖಿನಂದು ಒಂದೂವರೆ ಗಂಟೆ ಸುಮಾರಿಗೆ ಗದಗ ಜಿಲ್ಲೆಯ ಉದ್ಘಾಟನಾ ಪ್ರಾರಂಭೋತ್ಸವವಿದ್ದು, ಸದರಿ ಕಾರ್ಯಕ್ರಮದಲ್ಲೇನಾದರೂ ಅಥವಾ ಅಧಿಸೂಚನೆಯಲ್ಲಿ ಏನಾದರೂ ಬದಲಾವಣೆಗಳನ್ನು ಮಾಡುವುದಾಗಿದ್ದರೆ ಜನಪ್ರತಿನಿಧಿಗಳನ್ನು ಕರೆಸಿ ಅವರೊಂದಿಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ದಾವಣಗೆರೆಯಲ್ಲಿ ಶ್ರೀ ಶ್ಯಾಮನೂರು ಶಿವಶಂಕರಪ್ಪನವರಿಗೆ ಸೇರಿದ ಉದ್ಯಮಗಳನ್ನು ಸೀಜ್ ಮಾಡಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ, ನಿನ್ನೆ ಸದನದಲ್ಲಿ ನಮ್ಮ ಪಕ್ಷದವರಾದಿಯಾಗಿ ಜೊತೆಯಲ್ಲಿ ಎಲ್ಲಾ ವಿರೋಧ ಪಕ್ಷಗಳವರು ಸೇರಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವಿದ್ಯುತ್ ದರವನ್ನು ಏರಿಸಿದ ಬಗ್ಗೆ ಪ್ರತಿಭಟಿಸಿ ಹೋರಾಟ ಪ್ರಾರಂಭಿಸಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾ, ಕೆ.ಇ.ಬಿಯವರು ಅನೇಕ ಸುಧಾರಣೆಗಳನ್ನು ಮಾಡಬೇಕೆಂದು ಅಥವಾ ಆಗುತ್ತಿರುವ ವಿದ್ಯುತ್ ಕಳ್ಳತನಗಳನ್ನು ಕಂಡು ಹಿಡಿಯುವ ಸಲುವಾಗಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಂದು ಹೇಳಿದರು. ಆದರೆ, ನನಗೆ ಈಗಾಗಲೇ ಗೊತ್ತಾಗಿರುವಂತೆ, ಒಂದು ವಿಂಡಿಕ್ಟಿವ್ ಆ್ಯಟಿಟ್ಯೂಡ್ ಇಟ್ಟುಕೊಂಡು ಬೆಂಗಳೂರಿನಲ್ಲಿರುವ ಕೆಲವು ಕೆ.ಇ.ಬಿ. ಅಧಿಕಾರಿಗಳ ಮುಖಾಂತರ ಈ ಸದನದ ಒಬ್ಬ ಸದಸ್ಯರಾಗಿರುವ ಶ್ರೀಮಾನ್ ಶ್ಯಾಮನೂರು ಶಿವಶಂಕರಪ್ಪನವರಿಗೆ ಸೇರಿರುವ ದಾವಣಗೆರೆಯಲ್ಲಿರುವ ಅವರ ಕೈಗಾರಿಕೆಗಳ ಮೇಲೆ ನಿನ್ನೆ ರಾತ್ರಿ 15 ಜೀಪ್‌ಗಳಲ್ಲಿ15 ಜನ ಪೋಲೀಸರು ಹಾಗೂ ಇನ್ನಿತರ 48 ಸಿಬ್ಬಂದಿ ವರ್ಗದವರೊಡನೆ